**ಓ.ಎಸ್.ನಂಃ 66/2022** **ಪಿ.ಡಬ್ಲ್ಯೂ-1**

**<u>ದಿನಾಂಕಃ 14-11-2025 ರಂದು ಪ್ರಮಾಣ ವಚನವನ್ನು ಬೋಧಿಸಲಾಯಿತು.</u>**
**<u>ಮುಂದುವರೆದ ಮುಖ್ಯ ವಿಚಾರಣೆ ವಾದಿ ಪರ ಶ್ರೀ.ಎಎಕೆ ವಕೀಲರಿಂದಃ-</u>**

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿನ ಎಲ್ಲಾ ವಿಷಯಗಳು ಸತ್ಯವಾಗಿದೆ.

ದಿಃ- 10-01-2019 ರ ಕ್ರಯದ ಕರಾರು ಪತ್ರ ನಿಪಿ-1, ಸಾಕ್ಷಿ ನಿಪಿ-1 ರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-1(ಎ), 1 ನೇ ಪ್ರತಿವಾದಿ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-1(ಬಿ), 1 ನೇ ಸಾಕ್ಷಿದಾರರ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-1(ಸಿ), ದಾವಾ ಸ್ವತ್ತಿಗೆ ಸಂಬಂಧಿಸಿದ ಎರಡು ಪಹಣಿ ಪತ್ರಿಕೆ ನಿಪಿ-2 ಮತ್ತು 3, ಋಣಭಾರ ಪ್ರಮಾಣ ಪತ್ರ ನಿಪಿ-4, ಲೀಗಲ್ ನೋಟೀಸ ನಿಪಿ-5, ಮೂರು ಅಂಚೆ ರಶೀದಿಗಳು ನಿಪಿ-6 ರಿಂದ 8, ಎರಡು ಅಂಚೆ ಸ್ವೀಕೃತಿ ಪತ್ರ ನಿಪಿ-9 ಮತ್ತು 10, ಒಂದು ಅಂಚೆ ಲಕೋಟೆ ನಿಪಿ-11, ಅಂಚೆ ಲಕೋಟೆ ತೆರೆದ ನ್ಯಾಯಾಲಯದಲ್ಲಿ ಬೇರ್ಪಡಿಸಲಾಗಿ ಅದರಲ್ಲಿರುವ ನೋಟೀಸ ಪ್ರತಿ ನಿಪಿ-11(ಎ) ಎಂದು ಗುರುತಿಸಲಾಯಿತು. ಆದ್ದರಿಂದ ದಾವೆಯನ್ನು ಡಿಕ್ರಿ ಮಾಡಬೇಕೆಂದು ಕೋರಿಕೊಳ್ಳುತ್ತೇನೆ.

**<u>ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯ ಕೋರಿದ್ದು, ಮುಂದೂಡಲಾಯಿತು.</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ.ಕೇ. ಹೇ. ಸರಿ ಇದೆ.

ಸಹಿ/-
**(ದಯಾನಂದ)**
**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಲೂರು.**